

بسم اللهِ الرّحمٰن الرّحيم

# ಮುಸ್ಲಿಹ್ ಮೌಊದ್(ರ): ಭವಿಷ್ಯವಾಣಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18-02-2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಝ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಸ್ಲಾಂ ಯಾವುದೇ ದೃಷ್ಟಾಂತವನ್ನು ತೋರಿಸುವುದಿಲ್ಲವೆಂಬ ಶತ್ರುಗಳ ಆರೋಪಗಳಿಗೆ ಉತ್ತರವಾಗಿ, ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ಅರಿವು ಪಡೆದು ಇಸ್ಲಾಮಿನ ಸತ್ಯತೆಗೆ ಒಂದು ಮಹಾನ್ ದೃಷ್ಟಾಂತವಾಗಿ ನಿರ್ದಿಷ್ಟ ಸಮಯದೊಳಗೆ ಸುಮಾರು 52 ಗುಣವೈಶಿಷ್ಟ್ಯಗಳನ್ನು ಹೊಂದಿರುವ ಪುತ್ರನೊಬ್ಬನ ಜನನದ ಬಗ್ಗೆ ಭವಿಷ್ಯ ನುಡಿದರು. ಆ ಪುತ್ರನು ನಿರ್ದಿಷ್ಟ ಸಮಯದೊಳಗೆ ಜನಿಸಿದನು ಎಂದು ಮಾತ್ರವಲ್ಲ, ದೀರ್ಘಾಯುಸ್ಸನ್ನೂ ಪಡೆದನು ಹಾಗೂ ಆ ಪುತ್ರನಿಗೆ ಇಸ್ಲಾಮಿಗೆ ಅಸಾಮಾನ್ಯವಾದ ಸೇವೆ ಸಲ್ಲಿಸುವ ಸೌಭಾಗ್ಯ ಲಭಿಸಿತು. ಈ ಭವಿಷ್ಯವಾಣಿಯನ್ನು ನಾವು ಪ್ರತಿ ವರ್ಷ ಫೆಬ್ರವರಿ 20ರಂದು ಮುಸ್ಲಿಹ್ ಮೌಊದ್(ರ)ರ ಕುರಿತು ಇರುವ ಭವಿಷ್ಯವಾಣಿ ಎಂಬ ರೀತಿಯಲ್ಲಿ ಸ್ಮರಿಸುತ್ತೇವೆ ಮತ್ತು ಅದರ ವಿವಿಧ ಅಂಶಗಳ ಕುರಿತು ಜಮಾಅತಿನ ಸಭೆಗಳಲ್ಲಿ ಬೆಳಕು ಬೀರಲಾಗುತ್ತದೆ ಹಾಗೂ ಎಂ.ಟಿ.ಎ.ಯಲ್ಲೂ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ.

ಭವಿಷ್ಯವಾಣಿ ಪ್ರಕಾರ ದೀರ್ಘಾಯುಸ್ಸನ್ನು ಪಡೆದ ಈ ಮಗುವಿನ ಆರೋಗ್ಯದ ಸ್ಥಿತಿ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಬಾಲ್ಯದಲ್ಲಿ ನನ್ನ ಆರೋಗ್ಯ ಬಹಳ ದುರ್ಬಲವಾಗಿತ್ತು. ಆರಂಭದಲ್ಲಿ ಅತಿ ತೀವ್ರತರದ ಕೆಮ್ಮು ಇತ್ತು. ಅನಂತರ ಆರೋಗ್ಯ ಎಷ್ಟು ಕೆಟ್ಟುಹೋಯಿತು ಎಂದರೆ, 11, 12 ವರ್ಷ ಪ್ರಾಯದ ವರೆಗೆ ನಾನು ಜೀವನ್ಮರಣದ ಒದ್ದಾಟದ ನಡುವೆ ಇದ್ದೆ. ದೃಷ್ಟಿಶಕ್ತಿ ದುರ್ಬಲಗೊಂಡಿತು. ಆರೇಳು ತಿಂಗಳು ನನಗೆ ಜ್ವರ ಬರುತ್ತಿತ್ತು. ನನಗೆ ಕ್ಷಯರೋಗವಿದೆ ಎಂದು ಹೇಳಲಾಗಿತ್ತು. ಈ ಕಾರಣಗಳಿಂದ ಸರಿಯಾಗಿ ಕಲಿಯಲು ಕೂಡ ಸಾಧ್ಯವಾಗಿರಲಿಲ್ಲ. ಹೆಚ್ಚಾಗಿ ಶಾಲೆಯಲ್ಲಿ ಗೈರುಹಾಜರಾಗಿರುತ್ತಿದ್ದೆ." ಇಂತಹ ಸ್ಥಿತಿಯಲ್ಲಿ ಅವರಿಗೆ ದೀರ್ಘಾಯುಸ್ಸು ಲಭಿಸುವುದು ಎಂದು ಯಾರಿಗೆ ಖಾತರಿ ಕೊಡಲು ಸಾಧ್ಯ? ಇಂತಹ ಸ್ಥಿತಿಯಲ್ಲಿ ಅವರಿಗೆ ಇಂತಹ ಜ್ಞಾನಗಳು ಲಭಿಸುವುವು ಎಂದು ಯಾರಿಗೆ ಹೇಳಲು ಸಾಧ್ಯ? ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಪವಿತ್ರ ಖುರ್‌ಆನ್ ಮತ್ತು ಹದೀಸ್ ಕಲಿತರೆ ಸಾಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಒಟ್ಟಿನಲ್ಲಿ, ಭೌತಿಕ ಅರಿವು ಕಲಿಯಲು ಕಿಂಚಿತ್ತೂ ಯೋಗ್ಯವಾಗಿರದಷ್ಟು ನನ್ನ ಆರೋಗ್ಯ ದುರ್ಬಲವಾಗಿತ್ತು. ನನ್ನ ದೃಷ್ಟಿಯೂ ದುರ್ಬಲವಾಗಿತ್ತು. ಪ್ರೈಮರಿ, ಮಿಡ್ಲ್‌ಸ್ಕೂಲ್ ಮತ್ತು ಹತ್ತನೇ ತರಗತಿಯ ಪರೀಕ್ಷೆಗಳಲ್ಲಿ ಸೋತೆನು. ಯಾವುದೇ ಪರೀಕ್ಷೆಯಲ್ಲಿ ನಾನು ಪಾಸ್ ಆಗಿರಲಿಲ್ಲ."

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನನ್ನನ್ನು ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ತುಂಬಿಸಲಾಗುವುದು ಎಂದು ಅಲ್ಲಾಹನು ನನ್ನ ಕುರಿತು ಮುನ್ಸೂಚನೆ ನೀಡಿದ್ದನು. ಹೀಗೆ ಲೌಕಿಕವಾದ ಕಲಿಕೆಗಳಿಂದ ನಾನು ಏನೂ ಕಲಿಯದಿದ್ದರೂ ಇಸ್ಲಾಮಿನ ವಿಷಯಗಳಲ್ಲಿ ಇದಕ್ಕಿಂತ ಉತ್ತಮವಾಗಿ ಬೇರೇನೂ ಬರೆಯಲು ಸಾಧ್ಯವಿಲ್ಲವೆಂದು ಲೋಕವು ಒಪ್ಪಲು ನಿರ್ಬಂಧಿತರಾಗುವಂತಹ ಮಹತ್ತರ ಸಾಹಿತ್ಯ ಗ್ರಂಥಗಳನ್ನು ಅಲ್ಲಾಹನು ನನ್ನ ಲೇಖನಿಯಿಂದ ಬರೆಯಿಸಿದನು. **ತಫ್ಸೀರ್ ಕಬೀರ್** ಎಂಬ ಹೆಸರಿನಲ್ಲಿ ಪವಿತ್ರ ಖುರ್‌ಆನಿನ ವ್ಯಾಖ್ಯಾನದ ಒಂದು ಭಾಗವನ್ನು ಬರೆದೆನು. ಇಂತಹ ವ್ಯಾಖ್ಯಾನವು ಇಂದಿನ ತನಕ ಬರೆಯಲಾಗಿಲ್ಲವೆಂದು ಅದನ್ನು ಓದಿ ದೊಡ್ಡ ದೊಡ್ಡ ವಿರೋಧಿಗಳು ಕೂಡ ಒಪ್ಪಿಕೊಂಡರು."

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ನಾನು ಸಣ್ಣವನಾಗಿದ್ದಾಗ ಒಂದು ಕನಸಿನಲ್ಲಿ ದೇವದೂತರೊಬ್ಬರು ಸೂರಃ ಫಾತಿಹದ ವ್ಯಾಖ್ಯಾನವನ್ನು ನನಗೆ ಕಲಿಸಲು ಶುರುಮಾಡಿದರು. **ಇಯ್ಯಾಕ ನಅ್‌ಬುದು ವ ಇಯ್ಯಾಕ ನಸ್‌ತಈನ್** ತನಕ ತಲುಪಿದಾಗ ಹೇಳಿದರು: ಇದು ವರೆಗೂ ಗತಿಸಿಹೋದ ವ್ಯಾಖ್ಯಾನಗಾರರು ಕೇವಲ ಈ ಆಯತ್ ತನಕ ವ್ಯಾಖ್ಯಾನವನ್ನು ಬರೆದಿರುವರು. ಆದರೆ ನಾನು ನಿಮಗೆ ಇದರ ನಂತರದ ವ್ಯಾಖ್ಯಾನವನ್ನು ಕೂಡ ಕಲಿಸುತ್ತೇನೆ. ಹೀಗೆ ಅವರು ನನಗೆ ಸೂರಃ ಫಾತಿಹದ ಸಂಪೂರ್ಣ ವ್ಯಾಖ್ಯಾನವನ್ನು ಕಲಿಸಿಕೊಟ್ಟರು. ಸತ್ಯದಲ್ಲಿ ಈ ಕನಸಿನ ಅರ್ಥವೇನೆಂದರೆ, ಪವಿತ್ರ ಖುರ್‌ಆನಿನ ಜ್ಞಾನವನ್ನು ಮನವರಿಕೆ ಮಾಡುವ ಸಾಮರ್ಥ್ಯವನ್ನು ನನ್ನೊಳಗೆ ಇರಿಸಲಾಗಿದೆ ಎಂದಾಗಿದೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಲೋಕದ ಮುಂದೆ ಹೀಗೆ ಚಾಲೇಂಜ್ ಮಾಡಿದರು: ಈ ಸಾಮರ್ಥ್ಯ ನನ್ನೊಳಗೆ ಎಷ್ಟಿದೆ ಎಂದರೆ, ಸೂರಃ ಫಾತಿಹದ ಮೂಲಕವೇ ಇಸ್ಲಾಮಿನ ಎಲ್ಲ ಜ್ಞಾನಗಳನ್ನು ಹೊರತೆಗೆದು ವಿವರಿಸಲು ನನಗೆ ಸಾಧ್ಯವೆಂದು ನಾನು ವಾದಿಸುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನಮ್ಮ ಸ್ಕೂಲಿನ ಫುಟ್‌ಬಾಲ್ ಟೀಮ್ ಅಮೃತ್‌ಸರಿನಲ್ಲಿ ಮ್ಯಾಚ್ ಗೆದ್ದಾಗ ಅಮೃತ್‌ಸರಿನ ಒಬ್ಬ ಸರದಾರ ನಮ್ಮ ಟೀಮನ್ನು ಆಮಂತ್ರಿಸಿದರು. ಅಲ್ಲಿ ನನ್ನನ್ನು ಭಾಷಣ ಮಾಡಲು ನಿಲ್ಲಿಸಲಾಯಿತು. ನಾನು ದುಆ ಮಾಡಿದಾಗ ಸೂರಃ ಫಾತಿಹದ ಬಗ್ಗೆ ಒಂದು ಸೂಕ್ಷ್ಮ ವಿಷಯವನ್ನು ಅಲ್ಲಾಹನು ನನ್ನ ಹೃದಯದಲ್ಲಿ ಹಾಕಿದನು. ನಾನು ಹೇಳಿದೆ: ನೋಡಿರಿ, ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು **ಗೈರಿಲ್**

**ಮಗ್‌ಝೂಬಿ ಅಲೈಹಿಂ ವಲಝ್ಝಾಲ್ಲೀನ್** ಎಂಬ ಪ್ರಾರ್ಥನೆಯನ್ನು ಕಲಿಸಿರುವನು. **ಗೈರಿಲ್ ಮಗ್‌ಝೂಬಿ** ಎಂದರೆ, ನಾವು ಯಹೂದಿಯರಂತಾಗದಿರಲಿ ಮತ್ತು **ವಲಝ್ಝಾಲ್ಲೀನ್** ಎಂದರೆ, ನಾವು ಕ್ರೈಸ್ತರಂತಾಗದಿರಲಿ ಎಂದಾಗಿದೆ. ಈ ಉಮ್ಮತಿನಲ್ಲಿ ಒಬ್ಬ ಮಸೀಹ್ ಬರುವರು ಮತ್ತು ಯಾರು ಅವರನ್ನು ನಿರಾಕರಿಸುವವರೋ ಅವರು ಯಹೂದಿ ಗುಣವುಳ್ಳವರಾಗುವರು ಹಾಗೂ ಕೆಲವರು ತಮ್ಮ ಧರ್ಮದ ಅಧ್ಯಾಪನೆಗಳನ್ನು ಮನವರಿಕೆ ಮಾಡಲಾಗದೆ ಕ್ರೈಸ್ತರಾಗುವರು ಎಂದು ಹಝ್‌ರತ್ ಪೈಗಂಬರ್(ಸ) ಹೇಳಿರುವುದರಿಂದಲೂ ಈ ಸಂಗತಿ ಹೆಚ್ಚು ಸ್ಪಷ್ಟವಾಗುತ್ತದೆ. ಅಚ್ಚರಿಯ ಸಂಗತಿಯೇನೆಂದರೆ, ಸೂರಃ ಫಾತಿಹ ಮಕ್ಕದಲ್ಲಿ ಅವತೀರ್ಣವಾದ ಸಮಯದಲ್ಲಿ ಅತ್ಯಂತ ಹೆಚ್ಚಿನ ವಿರೋಧ ಮಕ್ಕದ ಬಹುದೇವಾರಾಧಕರ ಕಡೆಯಿಂದ ಆಗುತ್ತಿತ್ತು. ಆದರೆ ಬಹುದೇವಾರಾಧಕರಾಗದಿರಲಿ ಎಂಬ ಪ್ರಾರ್ಥನೆಯನ್ನು ಅಲ್ಲಾಹನು ಕಲಿಸಲಿಲ್ಲ. ಬದಲಾಗಿ ನಾವು ಯಹೂದಿ ಮತ್ತು ಕ್ರೈಸ್ತರಾಗದಿರಲಿ ಎಂಬ ಪ್ರಾರ್ಥನೆಯನ್ನು ಕಲಿಸಿಕೊಟ್ಟನು. ಇದರಲ್ಲಿ ಅಡಕವಾಗಿರುವ ಭವಿಷ್ಯವಾಣಿಯೇನೆಂದರೆ, ಮಕ್ಕದ ಬಹುದೇವಾರಾಧಕರು ಎಂದೆಂದಿಗೂ ಅಳಿಸಿಹೋಗಲ್ಪಡುವರು ಹಾಗೂ ಯಹೂದಿಯರು ಮತ್ತು ಕ್ರೈಸ್ತರು ಬಾಕಿಯುಳಿಯುವರು ಎಂದಾಗಿದೆ. ಅವರ ಪಿತೂರಿಗಳಿಂದ ರಕ್ಷಣೆ ಪಡೆಯಲು ಸದಾ ದುಆ ಮಾಡುವ ಆವಶ್ಯಕತೆಯಿರುವುದು. ನನ್ನ ಭಾಷಣ ಕೊನೆಗೊಂಡ ನಂತರ ದೊಡ್ಡ ದೊಡ್ಡ ಸರದಾರರು ಹೀಗೆ ಹೇಳಿದರು: "ನೀವು ಪವಿತ್ರ ಖುರ್‌ಆನನ್ನು ಚೆನ್ನಾಗಿ ಕಲಿತಿದ್ದೀರಿ. ನಾವಂತು ನಮ್ಮ ಪೂರ್ತಿ ಜೀವಿತದಲ್ಲಿ ಮೊದಲ ಬಾರಿ ಈ ಅಂಶವನ್ನು ಆಲಿಸಿದೆವು." ಇದೇ ಸತ್ಯ ಸಂಗತಿಯಾಗಿದೆ. ಎಲ್ಲ ವ್ಯಾಖ್ಯಾನಗಳನ್ನು ನೋಡಿರಿ. ಇಂದಿನ ತನಕ ಯಾವನೇ ವ್ಯಾಖ್ಯಾನಗಾರ ಈ ಅಂಶವನ್ನು ಹೇಳಿಲ್ಲ. ಅಲ್ಲಾಹನು ಈ ಸೂಕ್ಷ್ಮ ಸಂಗತಿಯನ್ನು ನನಗೆ ಮನವರಿಕೆ ಮಾಡಿಸಿಕೊಟ್ಟ ಸಮಯದಲ್ಲಿ ನನ್ನ ವಯಸ್ಸು ಇಪ್ಪತ್ತು ವರ್ಷದ ಆಸುಪಾಸಾಗಿತ್ತು.

ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನನಗೆ 11 ವರ್ಷ ಪ್ರಾಯವಿದ್ದಾಗ, ನಾನು ಅಲ್ಲಾಹನ ಮೇಲೆ ಏಕೆ ನಂಬಿಕೆ ಇರಿಸಿದ್ದೇನೆ ಮತ್ತು ಅವನ ಅಸ್ತಿತ್ವಕ್ಕೆ ಪುರಾವೆ ಏನು ಎಂಬ ಚಿಂತೆ ನನ್ನ ಹೃದಯದಲ್ಲಿ ಉಂಟಾಯಿತು. ನಾನು ತಡರಾತ್ರಿ ವರೆಗೂ ಈ ವಿಷಯದಲ್ಲಿ ಯೋಚಿಸುತ್ತಾ ಇದ್ದೆ. ಕೊನೆಗೆ 10, 11 ಗಂಟೆಗೆ, ದೇವನಿದ್ದಾನೆ ಎಂಬ ತೀರ್ಮಾನವನ್ನು ನನ್ನ ಹೃದಯ ನೀಡಿತು. ನನಗೆ ನನ್ನ ಸೃಷ್ಟಿಕರ್ತನು ಲಭಿಸಿದನು ಎಂಬ ಕಾರಣದಿಂದ ಅದು ನನಗೆ ಖುಶಿ ನೀಡಿದ ಘಳಿಗೆ ಆಗಿತ್ತು. ಕಿವಿಮಾತಿನ ವಿಶ್ವಾಸ, ಸ್ವಂತ ಅರಿವಿನ ವಿಶ್ವಾಸವಾಗಿ ಬದಲಾಯಿತು. ಹೇ ದೇವಾ, ನಿನ್ನ ಅಸ್ತಿತ್ವದ ಬಗ್ಗೆ ನನಗೆ ಎಂದಿಗೂ ಸಂಶಯ ಉಂಟಾಗದಿರಲಿ ಎಂದು ನಾನು ಅಲ್ಲಾಹನಲ್ಲಿ ಒಂದು ದೀರ್ಘಕಾಲದ ವರೆಗೂ ದುಆ ಮಾಡುತ್ತಿದ್ದೆ. ಈಗ ನನಗೆ 35 ವರ್ಷ ಪ್ರಾಯವಿದೆ. ಆದ್ದರಿಂದ ಈಗ ನಾನು ಹೀಗೆ ದುಆ ಮಾಡುತ್ತೇನೆ: ದೇವಾ, ನಿನ್ನ ಅಸ್ತಿತ್ವದ ಬಗ್ಗೆ ನನಗೆ ಅನುಭವ ಜ್ಞಾನವನ್ನು ನೀಡು. ನನಗೆ ಅಲ್ಲಾಹನ ಅಸಿತ್ವದ ಬಗ್ಗೆ ದೃಢವಿಶ್ವಾಸವುಂಟಾದಾಗ, ಹಝ್‌ರತ್ ಪೈಗಂಬರ್(ಸ) ಮತ್ತು ಹಝ್‌ರತ್ ಮಸೀಹ್ ಮೌಊದ್(ಅ)ರ ಸತ್ಯತೆ ಸಹ ನನಗೆ ಸ್ಪಷ್ಟವಾಯಿತು. ಹಝ್‌ರತ್ ಮುಸ್ಲಿಹ್ ಮೌಊದ್(ರ)ರನ್ನು ಅಲ್ಲಾಹನು ಜ್ಞಾನಗಳಿಂದ ತುಂಬಿಸಿದ ಬಗ್ಗೆ ಇದೂ ಒಂದು ಪುರಾವೆಯಾಗಿದೆ.

ಈ ಪುತ್ರನೇ ಮುಸ್ಲಿಹ್ ಮೌಊದ್ ಆಗುವರು ಎಂದು ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ತಿಳಿದಿದ್ದರು. **ತಶ್‌ಹೀಝುಲ್ ಅಝ್‌ಹಾನ್** ಎಂಬ ನಿಯತಕಾಲಿಕವನ್ನು ಪ್ರಕಾಶನಗೊಳಿಸುವುದರ ಉದ್ದೇಶ ಲಕ್ಷ್ಯಗಳ ಬಗ್ಗೆ ಹಝ್‌ರತ್ ಮುಸ್ಲಿಹ್ ಮೌಊದ್(ರ) ಒಂದು ಲೇಖನವನ್ನು ಬರೆದರು. ಅದನ್ನು ಹಝ್‌ರತ್ ಮಸೀಹ್ ಮೌಊದ್(ಅ)ರ ಮುಂದೆ ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ವಿಶೇಷವಾಗಿ ಶ್ಲಾಘಿಸಿದರು. ಆದರೆ ಅನಂತರ ವೈಯಕ್ತಿಕವಾಗಿ ಹಝ್‌ರತ್ ಮುಸ್ಲಿಹ್ ಮೌಊದ್(ರ)ರೊಡನೆ ಹೇಳಿದರು: ಮಿಯಾ, ನಿನ್ನ ಲೇಖನ ಬಹಳ ಉತ್ತಮವಾಗಿತ್ತು. ಆದರೆ ನನ್ನ ಮನಸ್ಸಿಗೆ ಅದು ಖುಶಿ ತಂದಿಲ್ಲ. ಏಕೆಂದರೆ ನಿನ್ನ ಮುಂದೆ ಹಝ್‌ರತ್ ಮಸೀಹ್ ಮೌಊದ್(ಅ)ರ ಗ್ರಂಥವಾದ ಬರಾಹೀನೆ ಅಹ್ಮದಿಯಾ ಇತ್ತು. ಅದರಿಂದ ಪ್ರಯೋಜನ ಪಡೆದು ಅದಕ್ಕಿಂತ ಉತ್ತಮವಾದುದನ್ನು ನೀನು ಕೊಂಡುಬರುತ್ತೀಯ ಎಂದು ನಾನು ಆಶಿಸಿದ್ದೆ. ಹಝ್‌ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳಿದ್ದರ ತಾತ್ಪರ್ಯವೇನೆಂದರೆ, ಹಿಂದಿನ ಬುನಾದಿಯನ್ನು ಮೇಲಕ್ಕೆ ಎತ್ತುವುದೇ ನಂತರ ಬರುವ ಪೀಳಿಗೆಯ ಕೆಲಸವಾಗಿದೆ. ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದು ಎಂತಹ ಸಂಗತಿಯೆಂದರೆ, ಇದನ್ನು ಮುಂದಿನ ಪೀಳಿಗೆಗಳು ಮನವರಿಕೆ ಮಾಡಿದರೆ ಸ್ವತಃ ಅನುಗ್ರಹಗಳನ್ನು ಮತ್ತು ವರದಾನಗಳನ್ನು ಗಳಿಸಬಹುದಾಗಿದೆ. ಮಾತ್ರವಲ್ಲ ಸಮುದಾಯದಕ್ಕೆ ಸಹ ಅನುಗ್ರಹಗಳು ಮತ್ತು ಕೃಪೆಗಳು ಲಭಿಸಲು ಅವರು ಕಾರಣಕರ್ತರಾಗುವರು. ಆದರೆ ಮುಂದಾಗುವ ಪ್ರಯತ್ನವು ಒಳ್ಳೆಯ ಸಂಗತಿಗಳಲ್ಲಿ ಆಗಿರಬೇಕು. ಅದಲ್ಲದೆ ಕಳ್ಳನ ಮಗನು ತಂದೆಗಿಂತ ದೊಡ್ಡ ಕಳ್ಳನಾಗಲು ಪ್ರಯತ್ನಿಸುವುದಲ್ಲ. ಬದಲಾಗಿ ನಮಾಝ್ ಮಾಡುವ ವ್ಯಕ್ತಿಯ ಮಕ್ಕಳು ತಂದೆಗಿಂತ ಉತ್ತಮವಾಗಿ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕು. ಹಝ್‌ರತ್ ಮುಸ್ಲಿಹ್ ಮೌಊದ್(ರ)ರ ದುರ್ಬಲ ಆರೋಗ್ಯ ಮತ್ತು ವಿದ್ಯಾಭ್ಯಾಸದ ಬಗ್ಗೆ ಗೊತ್ತಿದ್ದೂ ಅತ್ಯುತ್ತಮವಾದ ಲೇಖನಗಳನ್ನು ಬರೆಯುವ ಸಾಮರ್ಥ್ಯವನ್ನು ಈ ಹುಡುಗನು ಹೊಂದಿರುವನು ಎಂಬ ಉನ್ನತ ಆಲೋಚನೆಗಳನ್ನು ಹಝ್‌ರತ್ ಖಲೀಫ ಅವ್ವಲ್(ರ) ಇರಿಸಿದ್ದರು.

ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ನನ್ನ ಕಣ್ಣಿನ ದೃಷ್ಟಿ ನಷ್ಟವಾಗುವುದು ಎಂದು ಡಾಕ್ಟರ್‌ಗಳು ಹೇಳಿದಾಗ ಹಝ್‌ರತ್ ಮಸೀಹ್ ಮೌಊದ್(ಅ) ನನ್ನ ಆರೋಗ್ಯಕ್ಕಾಗಿ ವಿಶೇಷವಾಗಿ ದುಆಗಳನ್ನು ಮಾಡಲು ಮತ್ತು ಅದರೊಂದಿಗೆ ಉಪವಾಸಗಳನ್ನು ಇರಿಸಲು ಶುರುಮಾಡಿದರು. ಕೊನೆಯ ಉಪವಾಸವನ್ನು ಕೊನೆಗೊಳಿಸಿ ಅದನ್ನು ತೆರೆಯಲಿಕ್ಕಾಗಿ ಅವರು ಬಾಯಿಗೆ ಏನೋ ಹಾಕಿದಾಗ ಒಂದೇ ಸವನೆ ನಾನು ಕಣ್ಣುಗಳನ್ನು ತೆರೆದೆನು ಮತ್ತು ನನಗೀಗ ಕಾಣಬಹುದಾಗಿದೆ ಎಂದು ನಾನು ಉಚ್ಚಸ್ವರದಲ್ಲಿ ಹೇಳಿದೆನು. ಪವಿತ್ರ ಖುರ್‌ಆನಿನ ತರ್ಜುಮೆ ಮತ್ತು ಬುಖಾರಿ ಹಝ್‌ರತ್ ಖಲೀಫ ಅವ್ವಲ್(ರ)ರಿಂದ ಕಲಿಯಬೇಕೆಂದು ಮಾತ್ರ ಹಝ್‌ರತ್ ಮಸೀಹ್ ಮೌಊದ್(ಅ)

ಅನೇಕ ಬಾರಿ ಹೇಳುತ್ತಿದ್ದರು. ಅದರೊಂದಿಗೆ ಸ್ವಲ್ಪ ವೈದ್ಯಶಾಸ್ತ್ರವನ್ನು ಸಹ ಕಲಿಯಬೇಕು, ಏಕೆಂದರೆ ಅದು ನಮ್ಮ ಕೌಟುಂಬಿಕ ವೃತ್ತಿಯಾಗಿದೆ ಎಂದು ಹೇಳಿದ್ದರು. ಹೀಗೆ ನಾನು ಹಝ್ರತ್ ಖಲೀಫ ಅವ್ವಲ್[(ರ)]ರಿಂದ ವೈದ್ಯಶಾಸ್ತ್ರ, ಪವಿತ್ರ ಖುರ್‌ಆನಿನ ವ್ಯಾಖ್ಯಾನ ಮತ್ತು ಬುಖಾರಿಯನ್ನು ಸಹ ಕಲಿತೆ. ಅರಬಿ ಭಾಷೆಯ ಕೆಲವು ನಿಯತಕಾಲಿಕಗಳನ್ನು ಕೂಡ ನನಗೆ ಓದಲು ಸಂದರ್ಭ ಸಿಕ್ಕಿತ್ತು. ಒಟ್ಟಿನಲ್ಲಿ ಇದಾಗಿತ್ತು ನನ್ನ ವಿದ್ಯಾಭ್ಯಾಸ.

ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್[(ರ)]ರನ್ನು ಜ್ಞಾನಗಳಿಂದ ತುಂಬಿಸಿದಕ್ಕೆ ಖಲೀಫರಾಗಿದ್ದುಕೊಂಡು ಅವರ 52 ವರ್ಷಗಳ ಜೀವಿತವೇ ಸಾಕ್ಷಿಯಾಗಿದೆ. ಧಾರ್ಮಿಕ ವಿಷಯಗಳಾಗಿರಲಿ, ಲೌಕಿಕ ವಿಷಯವಾಗಿರಲಿ, ಅವರೊಡನೆ ಯಾವುದಾದರೂ ವಿಷಯದ ಬಗ್ಗೆ ಬರೆಯಲು ಮತ್ತು ವಿವರಿಸಲು ಹೇಳಲಾದಾಗ ಅವರು ಅರಿವು ಮತ್ತು ಜ್ಞಾನದ ನದಿಯನ್ನೇ ಹರಿಸಿದರು. ಅವರ ಭಾಷಣಗಳನ್ನು ಅನೇಕ ಬಾರಿ ಅನ್ಯರು ಕೂಡ ಬಹಳವಾಗಿ ಹೊಗಳಿದರು ಮತ್ತು ಪತ್ರಿಕೆಗಳು ಕೂಡ ವಾರ್ತೆಗಳನ್ನು ಪ್ರಕಟಿಸಿದವು.

ಹಝ್ರತ್ ಮುಸ್ಲಿಹ್ ಮೌಊದ್[(ರ)] ಹೇಳುತ್ತಾರೆ: ಆ ಭವಿಷ್ಯವಾಣಿ ನನ್ನ ಮೂಲಕ ಈಡೇರಿದೆ ಎಂದು ಅಲ್ಲಾಹನು ತನ್ನ ದಿವ್ಯವಾಣಿ ಮತ್ತು ಸೂಚನೆಗಳ ಮೂಲಕ ನನಗೆ ತಿಳಿಸಿರುವನು. ಇಸ್ಲಾಮ್ ಎಂಬುದು ಅಲ್ಲಾಹನ ಸತ್ಯಧರ್ಮವೆಂದೂ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅಲ್ಲಾಹನ ಸತ್ಯ ಸಂದೇಶವಾಹಕ ಎಂದೂ ಹಝ್ರತ್ ಮಸೀಹ್ ಮೌಊದ್[(ಅ)] ಅಲ್ಲಾಹನ ಸತ್ಯ ಪ್ರವಾದಿಯೆಂದೂ ಈಗ ಇಸ್ಲಾಮಿನ ಶತ್ರುಗಳ ಮೇಲೆ ಅಲ್ಲಾಹನು ಪರಿಪೂರ್ಣವಾದ ಪುರಾವೆಗಳೊಂದಿಗೆ ಸ್ಥಾಪಿಸಿರುವನು.

ಒಟ್ಟಿನಲ್ಲಿ ಈ ಭವಿಷ್ಯವಾಣಿ ಈಡೇರಿತು. ಆದರೆ ಹಝ್ರತ್ ಮಸೀಹ್ ಮೌಊದ್[(ಅ)]ರ ಕೆಲಸ ಪೂರ್ತಿಯಾಗುವ ತನಕ ಮತ್ತು ಇಸ್ಲಾಮಿನ ಧ್ವಜ ಲೋಕದೆಲ್ಲಡೆ ಹಾರಾಡುವ ವರೆಗೆ ಭವಿಷ್ಯವಾಣಿಯಲ್ಲಿ ಹೇಳಲಾದ ಸಂಗತಿಗಳು ನೆಲೆನಿಲ್ಲುವುವು. ಹಝ್ರತ್ ಪೈಗಂಬರ್[(ಸ)]ರ ಗೌರವ ಮತ್ತು ಘನತೆಯನ್ನು ಲೋಕದಲ್ಲಿ ಸ್ಥಾಪಿಸುವ ಮತ್ತು ಇಸ್ಲಾಮಿನ ಸತ್ಯತೆಯನ್ನು ಲೋಕದ ಮೇಲೆ ಪ್ರಕಟಿಸಿ ಅದನ್ನು ಹಝ್ರತ್ ಪೈಗಂಬರ್[(ಸ)]ರ ಬಾವುಟದ ಅಡಿಯಲ್ಲಿ ಕೊಂಡುಬರುವ ಗುರಿಯನ್ನು ನಾವು ನಮ್ಮ ಮುಂದಿರಿಸಿದರೆ ಮಾತ್ರ ಈ ಭವಿಷ್ಯವಾಣಿಯ ಹೆಸರಲ್ಲಿ ನಡೆಸಲಾಗುವ ಸಮ್ಮೇಳನಗಳು ಪ್ರಯೋಜನಕಾರಿಯಾಗುವುವು. ಹಝ್ರತ್ ಮಸೀಹ್ ಮೌಊದ್[(ಅ)]ರನ್ನು ನಂಬುವವರ ಮೂಲಕ ಮಾತ್ರವೇ ಇಸ್ಲಾಮಿನ ಧ್ವಜ ಲೋಕದಲ್ಲಿ ಪುನಃ ಹಾರಾಡುವುದು. ಅಲ್ಲಾಹನು ನಮಗೆ ಈ ಕೆಲಸವನ್ನು ಮಾಡಲು ಸೌಭಾಗ್ಯ ನೀಡಲಿ – (ಆಮೀನ್).

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 18-02-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon